# ಸ್ವಾಮಿ ವಿವೇಕಾನಂದರ ಆಪ್ತಬಂಧು ಜೋಸೆಫಿನ್ ಮೆಕ್‌ಲೌಡ್

ಪ್ರೊ.ಎನ್. ಕೃಷ್ಣಸ್ವಾಮಿ

( ಸೆಪ್ಟೆಂಬರ್ ೨೦೦೦ ಸಂಚಿಕೆಯಿಂದ ಮುಂದುವರೆದುದು )

## ಸ್ವಾಮಿ ಶ್ರೀವಾಸಾನಂದ

ಎಂ.ಎ. ನಾರಾಯಣ ಅಯ್ಯಂಗಾರ್ಯರು ಮೈಸೂರು ಮಹಾರಾಜ, ಯುವಕ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೂ ಅವರ ತಮ್ಮ ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್ ಅವರಿಗೂ ಟ್ಯೂಟರ್ (ಉಪಾಧ್ಯಾಯ)ರಾಗಿದ್ದರು. ಆಮೇಲೆ ಡೆಪ್ಯುಟಿ ಕಮಿಷನರ್ ಆಗಿದ್ದು ನಿವೃತ್ತರಾದರು.

ಮದರಾಸಿನಲ್ಲಿ ಕಾಲೇಜು ವಿದ್ಯಾರ್ಥಿಯಾಗಿದ್ದಾಗ ನಾರಾಯಣ ಅಯ್ಯಂಗಾರ್ ಸ್ವಾಮಿ ವಿವೇಕಾನಂದರನ್ನು ಭೇಟಿ ಮಾಡಿದ್ದರು. ಆಗ ವಿವೇಕಾನಂದರು ಈ ಚುರುಕಾದ ಯುವಕನನ್ನು '*Follow me*' (ನನ್ನ ಜೊತೆಗೆ ಬಾ) ಎಂದು ಆಹ್ವಾನಿಸಿದ್ದರು. ಆಗ ನಾರಾಯಣ ತಯಾರಾಗಿರಲಿಲ್ಲ. ಆಮೇಲೆ ಅವರಿಗೆ ಮದುವೆಯಾಗಿ ಮಕ್ಕಳೂ ಆದರು.

ಸ್ವಾಮೀಜಿ ಕಾಲವಾದಮೇಲೆ, ನಾರಾಯಣ ಅಯ್ಯಂಗಾರ್ ಕಲ್ಕತ್ತೆಗೆ ಹೋಗಿ ಶ್ರೀರಾಮಕೃಷ್ಣರ ಶಿಷ್ಯರ ದರ್ಶನ ಪಡೆದರು. ಶ್ರೀಮಾತೆ ಶಾರದಾದೇವಿಯವರಿಂದ ಮಂತ್ರದೀಕ್ಷೆ ಪಡೆದರು. ಸೇವೆಯಿಂದ ನಿವೃತ್ತರಾದ ಮೇಲೆ ತಮ್ಮ ಆಸ್ತಿಯನ್ನೆಲ್ಲ ಒಂದು ವಿಶ್ವಸ್ಥ ನಿಧಿಯನ್ನಾಗಿ ಮಾಡಿ *Holy Mother Trust* ಎಂಬ ನಿಧಿಯನ್ನು ಸ್ಥಾಪಿಸಿ ಅದರ ಸಹಾಯದಿಂದ ರಾಮಕೃಷ್ಣ ವೇದಾಂತ ಕಾಲೇಜ್ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು.

೧೯೨೬ರಲ್ಲಿ ನಾರಾಯಣ ಅಯ್ಯಂಗಾರ್ ಅವರು ಸ್ವಾಮಿ ಶಿವಾನಂದರಿಂದ ಸಂನ್ಯಾಸ ದೀಕ್ಷೆ ಪಡೆದು ಸ್ವಾಮಿ ಶ್ರೀವಾಸಾನಂದ ಎಂಬ ಹೆಸರು ಪಡೆದರು. ಶ್ರೀವಾಸಾನಂದ ಸ್ವಾಮಿಗಳನ್ನು ಭೇಟಿ ಮಾಡಿದ ಜೋಸೆಫಿನ್ ಅವರಿಂದ ಪ್ರಭಾವಿತರಾದರು. ಇವರಿಂದ ರಾಮಕೃಷ್ಣ ಸಂಘಕ್ಕೆ ಹೆಚ್ಚಿನ ಸೇವೆ ಸಲ್ಲುವುದೆಂದು ನಿರೀಕ್ಷಿಸಿದರು.

ಮೊದಲು ರಾಮಕೃಷ್ಣ ವೇದಾಂತ ಕಾಲೇಜು ಬೆಂಗಳೂರು ರಾಮಕೃಷ್ಣ ಆಶ್ರಮದಲ್ಲಿ ಕೆಲಸ ಮಾಡಿತು. ೧೯೩೯ರಿಂದ ಅದು ಮಲ್ಲೇಶ್ವರದಲ್ಲಿ ಬಾಡಿಗೆ ಕಟ್ಟಡಗಳಲ್ಲಿ ನಡೆಯಿತು. ಈ ಕಾಲದಲ್ಲಿ ನಾನೂ ಸ್ವಾಮಿ ಶ್ರೀವಾಸಾನಂದರ ಮತ್ತು ಇತರ ಸಾಧುಗಳ ತರಗತಿಗಳಲ್ಲಿ ಗೀತೆ, ವಿವೇಕಾನಂದ ಸಾಹಿತ್ಯ, ರಾಮಕೃಷ್ಣರ ಸಂದೇಶ ಇಂತಹ ವಿಷಯಗಳ ಪಾಠ ಕೇಳಿದ್ದೇನೆ. ಆಗ ನಾನು ಹೈಸ್ಕೂಲಿನಲ್ಲಿ ಓದುತ್ತಿದ್ದೆ, ಗಹನವಾದ ವಿಷಯಗಳನ್ನು ಅರ್ಥ ಮಾಡಿಕೊಳ್ಳುವುದು ಸುಲಭವಾಗಿರಲಿಲ್ಲ. ಆದರೆ ವೇದಾಂತ ಕಾಲೇಜಿನ ಸಾಧುಗಳ, ಬ್ರಹ್ಮಚಾರಿಗಳ ಸತ್ಸಂಗ ನನ್ನ ಮೇಲೆ ಗಾಢವಾದ ಪ್ರಭಾವ ಬೀರಿತು. ಆ ಸಂಸ್ಥೆಯಲ್ಲಿಯೇ ನಾನು ಮೊದಲು ಭಜನೆಗಳನ್ನು ಹಾಡುವುದು, ವೇದಪಠಣ ಮಾಡುವುದನ್ನು ಕಲಿತುಕೊಂಡೆ. ಸ್ವಾಮಿ ಶ್ರೀವಾಸಾನಂದರು ನಮಗೆ ಬೆಳಗ್ಗೆ ಐದು ಘಂಟೆಗೇ ಬಂದು ತರಗತಿಯನ್ನು ನಡೆಸಿ ಭಗವದ್ಗೀತೆಯ ಪರಿಚಯ ಮಾಡಿಸುತ್ತಿದ್ದರು. ಸ್ವಾಮಿ ಓಜಸಾನಂದರು ವಿವೇಕಾನಂದರ ಕರ್ಮಯೋಗ, ಭಕ್ತಿ ಯೋಗಗಳ ಪಾಠ ಹೇಳುತ್ತಿದ್ದರು.

## ಸಾಹಿತ್ಯ ಪ್ರಚಾರ, ರೊಮ್ಯೆ ರೊಲಾ

ಮಿಸ್ ಮೆಕ್‌ಲೌಡ್ ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆಯನ್ನು ಬರೆಯಿಸಲು ಬಹಳ ಪ್ರಯತ್ನ ಮಾಡಿದರು. ಸೋದರಿ ನಿವೇದಿತೆಯನ್ನು ಈ ಕಾರ್ಯದಲ್ಲಿ ತೊಡಗಿಸಿ ವಿವೇಕಾನಂದರು ಬರೆದಿದ್ದ ನೂರಾರು ಪತ್ರಗಳನ್ನು ತನ್ನ ಬಂಧು-ಮಿತ್ರವರ್ಗದವರಿಂದ ತಂದು ಸೇರಿಸಿ ನಿವೇದಿತೆಗೆ ಕೊಟ್ಟರು. ನಿವೇದಿತೆ ಕಾಲವಾದ ಮೇಲೆ ಈ ಕೆಲಸವನ್ನು ಮುಂದುವರಿಸಿದ ವಿವೇಕಾನಂದರ ಶಿಷ್ಯ, ಸ್ವಾಮಿ ವಿರಜಾನಂದರಿಗೂ ಎಲ್ಲ ವಿಧದಲ್ಲೂ ನೆರವು ಇತ್ತರು. ಕೊನೆಗೆ 'ವಿವೇಕಾನಂದರ ಜೀವನ —ಅವರ ಪೌರ್ವಾತ್ಯ ಮತ್ತು ಪಾಶ್ಚಾತ್ಯ ಶಿಷ್ಯರಿಂದ' ಪ್ರಕಟವಾಯಿತು. ಈ ಗ್ರಂಥ ಈಗಲೂ ಬಹು ಜನಪ್ರಿಯವಾಗಿದೆ.

ಸ್ವಾಮಿ ವಿವೇಕಾನಂದರ ಜ್ಞಾನಯೋಗ, ಕರ್ಮಯೋಗ, ಭಕ್ತಿಯೋಗ, ರಾಜಯೋಗ ಗ್ರಂಥಗಳನ್ನು ಮೆಕ್‌ಮಿಲನ್ ಕಂಪೆನಿಯವರು ಪ್ರಕಟಿಸುವಂತೆ ಮಾಡಲು ಮೆಕ್‌ಲೌಡ್ ಶ್ರಮಿಸಿದರು (೧೯೧೯). ಆಮೇಲೆ ಈ ಪುಸ್ತಕಗಳ ಪಾಕೆಟ್ ಎಡಿಷನ್ ಪ್ರಕಟವಾಗಬೇಕೆಂದು ಇವರಿಗೆ ಅನ್ನಿಸಿತು. ನ್ಯೂಯಾರ್ಕ್‌ನಲ್ಲಿ ವೇದಾಂತ ಪ್ರಚಾರ ಮಾಡುತ್ತಿದ್ದ ಸ್ವಾಮಿ ನಿಖಿಲಾನಂದರು ಈ ಕಾರ್ಯವನ್ನು ೧೯೩೩ರಲ್ಲಿ ಮಾಡಿದರು. ಆಕರ್ಷಕ ರಟ್ಟಿನೊಂದಿಗೆ ಪ್ರಕಟವಾದ ಸಣ್ಣ ಆಕಾರದ ಆವೃತ್ತಿ ಜನಪ್ರಿಯವಾಯಿತು.

ಪುಸ್ತಕಗಳ ಜರ್ಮನ್, ಫ್ರೆಂಚ್ ಭಾಷಾಂತರಗಳನ್ನು ಮಿತ್ರವರ್ಗದ ನೆರವಿನಿಂದ ತಯಾರಿಸಿ ಪ್ರಕಟಿಸಲು ಶ್ರಮಿಸಿದರು. ಟೋನಿ ಸುಸ್‌ಮನ್ ಎಂಬ ಮಹಿಳೆ ಜರ್ಮನ್ ಭಾಷೆಯಲ್ಲೂ, ಜೀನ್ ಹರ್ಬರ್ಟ್ ಎಂಬ ಪಂಡಿತ ಫ್ರೆಂಚ್ ಭಾಷೆಯಲ್ಲೂ ಭಾಷಾಂತರ ಮಾಡಿದರು.

ಧನಗೋಪಾಲ ಮುಖರ್ಜಿ ಎಂಬ ಲೇಖಕನಿಗೆ ಮೆಕ್‌ಲೌಡ್ ಒತ್ತಾಸೆ ನೀಡಿ ಶ್ರೀರಾಮಕೃಷ್ಣರನ್ನು ಕುರಿತು ಮೊದಲ ಬಾರಿಗೆ (೧೯೨೬ ರಲ್ಲಿ) ಒಂದು ಇಂಗ್ಲಿಷ್ ಪುಸ್ತಕದ ರಚನೆಯಾಗಲು ಕಾರಣರಾದರು. ಧನ ಗೋಪಾಲ ಮುಖರ್ಜಿಯ *The Face of Silence*–ಮೌನದ ಮುಖ–ಎಂಬ ಗ್ರಂಥ ಅನೇಕರಿಗೆ ಶ್ರೀರಾಮಕೃಷ್ಣರ ಪರಿಚಯ ಮಾಡಿಸಿತು. ಪ್ರಸಿದ್ಧ ಫ್ರೆಂಚ್ ಸಾಹಿತಿ ರೊಮ್ಯೆ ರೊಲಾಗೆ ಈ ಪುಸ್ತಕದಿಂದ ರಾಮಕೃಷ್ಣರ ಪರಿಚಯ ದೊರೆಯಿತು.

೧೯೧೫ರಲ್ಲಿ ನೊಬೆಲ್ ಪುರಸ್ಕಾರವನ್ನು ಪಡೆದ ರೊಮ್ಯೆ ರೊಲಾ ಅವರಿಗೆ ಜೋ ಮೆಕ್‌ಲೌಡ್ ರಾಮಕೃಷ್ಣ-ವಿವೇಕಾನಂದರ ವಿಷಯ ಹೇಳಿದರು. ಮೊದಲಿನಿಂದಲೂ ಭಾರತದ ಬಗೆಗೆ ಅಭಿಮಾನ ಹೊಂದಿದ್ದ ಈ ಮಹಾನ್ ಲೇಖಕ ೧೯೨೯ರಲ್ಲಿ ರಾಮ ಕೃಷ್ಣರ ಜೀವನವನ್ನೂ ೧೯೩೦ರಲ್ಲಿ 'ವಿವೇಕಾನಂದರ ಜೀವನ ಮತ್ತು ಸಂದೇಶ'ವನ್ನೂ ಫ್ರೆಂಚ್ ಭಾಷೆಯಲ್ಲಿ ಬರೆದು ಪ್ರಕಟಿಸಿದರು. ಇದರಿಂದಾಗಿ ರಾಮಕೃಷ್ಣ-ವಿವೇಕಾನಂದರ ವಿಷಯ ಯೂರೋಪಿನಲ್ಲೆಲ್ಲಾ ಪ್ರಸಾರವಾಯಿತು. ೧೯೬೦ರಲ್ಲಿ ರೊಮ್ಯೆ ರೊಲಾ ಅವರ ದಿನಚರಿ ಪ್ರಕಟವಾದಾಗ ಅದರಲ್ಲಿ ಜೋಸೆಫಿನ್ ಮೆಕ್‌ಲೌಡ್ ಜೊತೆಗೆ ತಾವು ನಡೆಸಿದ ಸಂಭಾಷಣೆಗಳ ವಿವರಗಳನ್ನು ರೊಲಾ ನಮೂದಿಸಿರುವುದನ್ನು ನೋಡಬಹುದು. ೧೯೩೬ರಲ್ಲಿ ರಷ್ಯದ ಕಮ್ಯೂನಿಸ್ಟ್ ಸರ್ಕಾರ ರೊಮ್ಯೆ ರೊಲಾರ ಸಂಪೂರ್ಣ ಸಾಹಿತ್ಯವನ್ನು ರಷ್ಯನ್ ಭಾಷೆಗೆ ತರ್ಜುಮೆ ಮಾಡಿ ಪ್ರಕಟಿಸಿತು. ಇದರಿಂದ ಕಮ್ಯೂನಿಸ್ಟ್ ಜನತೆಗೂ ವೇದಾಂತದ ಪರಿಚಯ ಆಯಿತು, ಏಕೆಂದರೆ ರೊಮ್ಯೆ ರೊಲಾ ಸಾಹಿತ್ಯದಲ್ಲಿ ರಾಮಕೃಷ್ಣ-ವಿವೇಕಾನಂದರ ಜೀವನ-ಸಂದೇಶಗಳೂ ಸೇರಿದ್ದುವಷ್ಟೆ. ರೊಮ್ಯೆ ರೊಲಾ ರಾಮಕೃಷ್ಣ ಸಂಘದ ಅನೇಕ ಸಾಧುಗಳೊಡನೆ ಪತ್ರವ್ಯವಹಾರ ನಡೆಸಿದ್ದರು. ರೊಲಾ ಗಾಂಧೀಜಿಯ ಜೀವನವನ್ನೂ ಬರೆದಿದ್ದಾರೆ. ಆಮೇಲೆ ಅವರಿಗೆ ಗಾಂಧೀಜಿಯನ್ನೂ ರವೀಂದ್ರನಾಥ ಠಾಕೂರರನ್ನೂ ಭೇಟಿ ಮಾಡಲು ಅವಕಾಶವಾಗಿ ಸಂತೋಷವಾಯಿತು.

## ರಾಮಕೃಷ್ಣ ಶತಾಬ್ದಿ ಸಮಾರಂಭ

ಶ್ರೀರಾಮಕೃಷ್ಣರು ೧೮೩೬ರಲ್ಲಿ ಜನಿಸಿದರು. ೧೯೩೬-೩೭ರ ವರ್ಷ ಅವರ ಶತಾಬ್ದ ಸಮಾರಂಭವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಬೇಲೂರು ಮಠದಲ್ಲಿ ಭವ್ಯವಾದ ರಾಮಕೃಷ್ಣ ಮಂದಿರ ಶೀಘ್ರದಲ್ಲಿಯೇ ಉದ್ಘಾಟನೆ ಆಯಿತು.

ಜನವರಿ ೧೯೩೫ರಲ್ಲಿ ನ್ಯೂಯಾರ್ಕ್‌ನ ರಾಮಕೃಷ್ಣ-ವಿವೇಕಾನಂದ ಕೇಂದ್ರದಲ್ಲಿ ಜೊಸೆಫಿನ್ ಮೆಕ್‌ಲೌಡ್ ಮಾತನಾಡಿದರು.

೧೯೩೬ರ ಜನವರಿಯಲ್ಲಿ ಜೋ ಕಲ್ಕತ್ತೆಗೆ ಬಂದರು. ಅಲ್ಲಿಂದ ಸಾರಗಾಚಿ ಎಂಬ ಸಣ್ಣ ಊರಿಗೆ ಹೋಗಿ ರಾಮಕೃಷ್ಣ ಮಠ ಮತ್ತು ಮಿಷನ್ನಿನ ಅಧ್ಯಕ್ಷರಾದ ಸ್ವಾಮಿ ಅಖಂಡಾನಂದರರನ್ನು ಭೇಟಿ ಮಾಡಿದರು. ಅಖಂಡಾನಂದರು ರಾಮಕೃಷ್ಣರ ಶಿಷ್ಯರು, ವಿವೇಕಾನಂದರ ಅಚ್ಚುಮೆಚ್ಚಿನ ಅನುಯಾಯಿ. ಅವರಿಗೆ ದೀನ ಜನರ ಮೇಲೆ ಅಪಾರ ಕರುಣೆ. ಅದರ ಕುರುಹಾಗಿಯೇ ಸಾರಗಾಚಿಯಲ್ಲಿ ಒಂದು ಅನಾಥಾಲಯ ಸ್ಥಾಪಿಸಿದರು, ತೋಟ ಬೆಳೆಸಿದರು. ಅಲ್ಲಿನ ಮಕ್ಕಳನ್ನು ಬಹು ಪ್ರೀತಿ ಯಿಂದ ಪೋಷಿಸಿದರು.

ಅಂದು ಜನವರಿ ೧೯. ಜೋ ಮತ್ತು ಅಖಂಡಾನಂದರು ಸಾರಗಾಚಿ ಆಶ್ರಮದ ದೇವರ ಮನೆಯಲ್ಲಿ ನೆಲದ ಮೇಲೆ ಕುಳಿತು ಅವರಿಬ್ಬರಿಗೂ ಪ್ರಿಯರಾದ ವಿವೇಕಾನಂದರ ಬಗೆಗೆ ಮಾತನಾಡಿದರು: ಜೋ ಹೇಳಿದರು, 'ಅವರು ನಿಮ್ಮಲ್ಲಿಯೂ ನನ್ನಲ್ಲಿಯೂ, ಎಲ್ಲರಲ್ಲಿಯೂ ಜೀವಿಸಿದ್ದಾರೆ, ವಿವೇಕಾನಂದರಿಗೆ ಮರಣ ಇಲ್ಲ.' ಸಂಜೆ ಜೋ ಕಲ್ಕತ್ತೆಗೆ ಹಿಂದಿರುಗಿದರು.

ಬೇಲೂರು ಮಠದಲ್ಲಿ ಶತಾಬ್ದ ಸಮಾರಂಭ ಫೆಬ್ರವರಿ ೨೪ರಂದು ಆರಂಭವಾಯಿತು. ಸಂಜೆ ಭಾಷಣಗಳು ನಡೆದವು. ದಿನವೆಲ್ಲಾ ಪೂಜೆ, ಹೋಮ, ಕೀರ್ತನಾನಂದ, ಸಂಗೀತ. ಎರಡು ದಿನಗಳ ತರುವಾಯ ಸಾರ್ವಜನಿಕ ಸಭೆ ನಗರಸಭೆಯಲ್ಲಿ. ನಂತರ ೧೯೩೭ರಲ್ಲಿ ಅತಿ ಮುಖ್ಯ ಸಮಾವೇಶ ನಡೆಯಿತು.

ಏಪ್ರಿಲ್ ತಿಂಗಳಲ್ಲಿ ಜೋ ಪ್ಯಾರಿಸ್ಸಿನ ಸೋರ್‌ಬೋನ್ ವಿಶ್ವವಿದ್ಯಾನಿಲಯದಲ್ಲಿ ನಡೆದ ರಾಮಕೃಷ್ಣ ಶತಾಬ್ದ ಸಮಾರಂಭದಲ್ಲಿ ಭಾಗವಹಿಸಿದರು. ಇದನ್ನು ಕುರಿತು ಏಪ್ರಿಲ್ ೧೬ನೆ ತಾರೀಖಿನ ಪತ್ರದಲ್ಲಿ ಜೋ ಬೊಶಿ ಸೇನ್‌ಗೆ ಬರೆದಿದ್ದಾರೆ. ಜೋ ಐದು ನಿಮಿಷಗಳ ಕಾಲ ಫ್ರೆಂಚ್ ಭಾಷೆಯಲ್ಲಿ ಮಾತನಾಡಿದರು! ಸ್ವಾಮಿ ಯತೀಶ್ವರಾನಂದರು ಐದು ನಿಮಿಷಗಳ ಉತ್ಕೃಷ್ಟವಾದ ಇಂಗ್ಲಿಷ್ ಭಾಷಣ ಮಾಡಿದರು. ಈ ಕಾರ್ಯಕ್ರಮಗಳನ್ನೆಲ್ಲಾ ಏರ್ಪಡಿಸಿದವರು ಜೋ ಮೆಕ್‌ಲೌಡ್‌ರ ಮಿತ್ರರಾಗಿದ್ದ ಜೀನ್ ಹರ್ಬರ್ಟ್ ಎಂಬ ಫ್ರೆಂಚ್ ಪಂಡಿತ. ಇವರು ಸೊರಬೊನ್ ವಿಶ್ವವಿದ್ಯಾಲಯದಲ್ಲಿ ತತ್ವಶಾಸ್ತ್ರ ಪ್ರಾಧ್ಯಾಪಕರಾಗಿದ್ದು ಜೋ ಮೂಲಕ ರಾಮಕೃಷ್ಣ-ವಿವೇಕಾನಂದರ ಪ್ರಭಾವಕ್ಕೆ ಒಳಗಾಗಿದ್ದರು, ಭಾರತಕ್ಕೆ ಹೋಗಿದ್ದರು.

## ಆಲ್ಮೋರಾದಲ್ಲಿ

ಹಿಮಾಲಯದ ತಪ್ಪಲಲ್ಲಿ ಕುಮಾಂವ್ ಬೆಟ್ಟಗಳ ಮೇಲಿದೆ ಆಲ್ಮೋರಾ. ಇಲ್ಲಿಂದ ಹಿಮಾಲಯ ಪರ್ವತದ ಬೆಳ್ಳಿಮಂಜು ಮುಸುಕಿದ ಪರ್ವತ ಶಿಖರಗಳು ಬಹು ರಮಣೀಯವಾಗಿ ಕಾಣುತ್ತವೆ. ಆಲ್ಮೋರಾ ವಿವೇಕಾನಂದರಿಗೆ ಪ್ರಿಯವಾದ ಊರು. ಅವರು ಇಲ್ಲಿಗೆ ಅನೇಕ ಬಾರಿ ಬಂದು ವಾಸಿಸಿದ್ದರು.

ಅಕ್ಟೋಬರ್ ೧೯೩೮ರಲ್ಲಿ ಜೋ ಭಾರತಕ್ಕೆ ಮತ್ತೆ ಬಂದರು. ಬೊಂಬಾಯಿನಿಂದ ನೇರವಾಗಿ ಆಲ್ಮೋರಾಕ್ಕೆ ಹೋಗಿ ಬೊಶಿ ಸೇನ್ ಮನೆಯಲ್ಲಿ ಅತಿಥಿಯಾಗಿದ್ದರು. ಬೊಶಿ ಸೇನ್ ಹೆಂಡತಿ ಗೆರ್ಟ್ ರೂಡ್. ಈಕೆ ಪ್ರಖ್ಯಾತ ಅಮೆರಿಕನ್ ಸಾಹಿತಿ-ತತ್ವಜ್ಞ ಎಮರ್ಸನ್‌ನ ಮೊಮ್ಮಗಳು, ಇವಳ ಸಹೋದರ ಒಬ್ಬ ಭೌತ ವಿಜ್ಞಾನಿ, ಶಾಂತಿವಾದಿ. ನಾನು ೧೯೭೬ರಲ್ಲಿ ಆಲ್ಮೋರಾಕ್ಕೆ ಹೋಗಿದ್ದಾಗ ಈ ಇಬ್ಬರನ್ನೂ ನೋಡಿ ಅವರೊಡನೆ ಮಾತನಾಡಿದೆ. ಆ ವೇಳೆಗೆ ಬೋಶಿ ಸೇನ್ ತೀರಿಕೊಂಡಿದ್ದರು. ಆದರೆ ಅವರು ಸ್ಥಾಪಿಸಿದ ವಿವೇಕಾನಂದ ಲ್ಯಾಬೊರೇಟರಿ ಒಳ್ಳೆಯ ಸಂಶೋಧನೆಯ ಕೆಲಸವನ್ನು ಮುಂದುವರೆಸಿದೆ. ಬೋಶಿ ಸೇನ್ ಜಗದೀಶಚಂದ್ರ ಬೋಸರ ಶಿಷ್ಯ, ರಾಮಕೃಷ್ಣ ಮಿಷನ್ನಿನ ಸ್ವಾಮಿಗಳಿಗೆ ಬೇಕಾದವರು, ಸಸ್ಯ ವಿಜ್ಞಾನಿ. ಪಂಡಿತ ನೆಹರೂ ಬೋಶಿ ಸೇನರೊಡನೆ ಸಂಪರ್ಕ ಹೊಂದಿದ್ದರು.

ಜೋ ಆಲ್ಮೋರಾಕ್ಕೆ ಬಂದಾಗ ಮಧ್ಯಾಹ್ನ ಮೂರು ಘಂಟೆ. ಊಟ ತಯಾರಾಗಿದ್ದಿತು. ಆದರೆ ಮೊದಲು ಜೋ ಮಾಡಿದ ಕೆಲಸವೆಂದರೆ 'ನಿವೇದಿತೆಯ ತಂಗಿ ಮಿಸೆಸ್ ವಿಲ್ಸನ್‌ಗೆ ನೂರು ಡಾಲರ್ ಕಳುಹಿಸಿ ಆಕೆಯನ್ನು ಭಾರತಕ್ಕೆ ಕರೆಯಲೆ?' ಎಂದು ಬೋಶಿ ಸೇನರನ್ನು ಕೇಳಿದ್ದು. ಬೊಶಿ ಸೇನ್ ಆಗಲಿ ಎಂದೊಡನೆ ಅಲ್ಲಿಯೇ ಕುಳಿತು ಒಂದು ಚೆಕ್ ಬರೆದರು, ಪತ್ರ ಬರೆದರು. ಗೆರ್ಟ್‌ರೂಡ್‌ಗೆ

ಅಡುಗೆ ತಣ್ಣಗಾಗುತ್ತಿದೆ ಎಂದು ಆತಂಕ. ಊಟ ಆದಮೇಲೆಯೂ ಜೋ ಉತ್ಸಾಹದ ಆಗರ. ಕಾರು ಹತ್ತಿ ನರ್ತಕ ಉದಯ ಶಂಕರ್ ಮನೆಗೆ ಹೋದರು. ಅಲ್ಲಿ ಶಂಕರ್ ಒಂದು ನೃತ್ಯಶಾಲೆ ಆರಂಭಿಸಿದ್ದರು.

ಮರುದಿನ ಬ್ರೂಸ್ಟರ್ ದಂಪತಿಗಳ ಮನೆಗೆ ಭೇಟಿ, ಹೆಲೆನ್ ರುಬೆಲ್—ಭಕ್ತೆ ಮನೆಗೆ ದಂಡಿಯಲ್ಲಿ ಪಯಣ. ಸರ್ಕಾರೀ ಅಧಿಕಾರಿಯ ಜೊತೆ ಭೇಟಿ, ಅದರ ಮರುದಿನ ಉದಯಶಂಕರ್ ಮನೆಯಲ್ಲಿ ಊಟ. ಆಲ್ಮೋರಾ ಹಿಮಾಲಯದಲ್ಲಿ ಒಂದು ಆಧ್ಯಾತ್ಮಿಕ ಕೇಂದ್ರವಾಗುತ್ತದೆ ಎಂದು ಸ್ವಾಮೀಜಿ ಭವಿಷ್ಯ ನುಡಿದದ್ದು ನೆನಪಾಗುತ್ತದೆ.

ಆಲ್ಮೋರಾದ ರಾಮಕೃಷ್ಣ ಆಶ್ರಮದ ಸಾಧುಗಳು ಜೋ—ಟಾಂಟೈನ್‌ರನ್ನು ಭೇಟಿಮಾಡಲು ಉತ್ಸುಕರಾಗಿದ್ದರು. ಜೋ ಅವರೊಡನೆ ಮುಕ್ಕಾಲು ಘಂಟೆ ವಿವೇಕಾನಂದರ ವಿಷಯ ಮಾತನಾಡಿದರು. ನಲವತ್ತು ವರ್ಷಗಳ ಹಿಂದೆ ತಾವು ವಿವೇಕಾನಂದರಿಗೆ ಅವರ ಪ್ರಿಯ ಶಿಷ್ಯ ಗುಡ್‌ವಿನ್ನ್‌ನ ಮರಣದ ಸುದ್ದಿ ಹೇಳಿದ್ದು, ಅದರಿಂದ ವಿವೇಕಾನಂದರು ವಿಚಲಿತರಾದದ್ದು, ಎಲ್ಲ ವನ್ನೂ ಸಾಧುಗಳೊಡನೆ ಮಾತನಾಡುತ್ತ ನೆನಪು ಮಾಡಿಕೊಂಡರು.

ಅಕ್ಟೋಬರ್ ೨೩ರಂದು ಆಲ್ಮೋರಾದಿಂದ ಬೇಲೂರು ಮಠಕ್ಕೆ ಹೋದರು. ಅಲ್ಲಿಂದ ಮುಂದೆ ಮದರಾಸು. ಅಲ್ಲಿಂದ ಸ್ವಾಮಿ ಶಾಂಭವಾನಂದರೊಡನೆ ಮೈಸೂರು ಯುವರಾಜರ ಕಾರಿನಲ್ಲಿ ಮೈಸೂರು ಪ್ರಯಾಣ. ಪೊನ್ನಂಪೇಟೆಗೆ ಹೋಗಿ ಶಾಂಭವಾನಂದರು ನಡೆಸುತ್ತಿದ್ದ ಜೇನು ಸಾಕಣೆ, ಜೇನುತುಪ್ಪದ ಸಹಕಾರ ಸಂಘಗಳನ್ನು ಕಂಡು ಹರ್ಷಿಸಿದರು. ಮೈಸೂರಿನಲ್ಲಿ ಮಹಾರಾಜರು, ಯುವರಾಜರು, ರಾಣೀವಾಸದವರು, ಆಗ ೧೯ ವರ್ಷದ ಜಯ ಚಾಮರಾಜ ಒಡೆಯರು—ಎಲ್ಲರನ್ನೂ ಸಂಧಿಸಿ ಮಾತನಾಡಿದರು.

ಮತ್ತೆ ನವೆಂಬರ್ ತಿಂಗಳಲ್ಲಿ ಬೇಲೂರು ಮಠ. ಬೇಲೂರು ಮಠದಲ್ಲಿ ಹೊಸ ಕಾರ್ಯ ಚಟುವಟಿಕೆಗಳು ಆರಂಭವಾದವು. ಇವೆಲ್ಲಕ್ಕೂ ಜೋ ಉದಾರವಾಗಿ ಧನಸಹಾಯ ಮಾಡಿದರು.

## ಜೀವನದ ಕೊನೆಯ ಹತ್ತು ವರ್ಷ

ಮಾರ್ಚ್ ೧೯೩೩ರಲ್ಲಿ ಜೋ ಕೊನೆಯ ಬಾರಿಗೆ ಭಾರತದಿಂದ ಹೊರಟರು. ಇಂಗ್ಲೆಂಡಿಗೆ ಹೋಗಿ ಅಲ್ಲಿ ಕೆಲವು ಕಾಲ ಇದ್ದರು—ಇಂಗ್ಲೆಂಡಿನಲ್ಲಿ ಜೋ ಮನೆ ಇದ್ದದ್ದು ಷೇಕ್ಸ್‌ಪಿಯರ್‌ನ ಜನ್ಮಸ್ಥಾನವಾದ ಸ್ಟ್ರಾಟ್‌ಫೋರ್ಡ್ ಆನ್ ಏವನ್ ಎಂಬ ಊರಿನಲ್ಲಿ. ಅದು ಷೇಕ್ಸ್‌ಪಿಯರನ ಮಗಳ ಮನೆ. ಬೆಟ್ಟಿ ಲೆಗೆಟ್ ಅದನ್ನು ಕೊಂಡುಕೊಂಡಿದ್ದರು—ತಂಗಿ ಜೋಗೆ ಅದನ್ನು ಕೊಟ್ಟರು. ಆ ಮನೆಯಲ್ಲಿ ಜೋ ಅನೇಕ ಅತಿಥಿಗಳ ಸತ್ಕಾರ ಮಾಡುತ್ತಿದ್ದರು. ಇಲ್ಲಿಂದಲೇ ಫ್ರಾನ್ಸ್, ಸ್ವಿಟ್ಸರ್ಲೆಂಡ್ ಮೊದಲಾದ ದೇಶಗಳಿಗೆ ಪ್ರವಾಸ ಹೋಗುತ್ತಿದ್ದರು. ಹೋದ ಕಡೆಯಲ್ಲೆಲ್ಲ ವಿದ್ವಾಂಸರ, ಅಧಿಕಾರಿಗಳ, ಸಿರಿವಂತರ, ಪ್ರಭಾವಶಾಲಿಗಳ ಪರಿಚಯ ಮಾಡಿಕೊಂಡು ಅವರಿಗೆಲ್ಲ ವಿವೇಕಾನಂದರ ವ್ಯಕ್ತಿತ್ವ, ಅವರ ಜೀವನ, ಸಂದೇಶಗಳ ಪರಿಚಯ ಮಾಡಿಕೊಡುತ್ತಿದ್ದರು—ಅದೇ ಆಕೆಯ ಜೀವನದ ಮುಖ್ಯ ಕಾರ್ಯ.

ಕೊನೆಯ ಕಾಲದಲ್ಲಿ ಜೋ ಆರೆಂಟು ತಿಂಗಳು ಲಾಸ್ ಏಂಜಲೀಸ್‌ನ ಹಾಲಿವುಡ್ ವೇದಾಂತ ಸಂಘದಲ್ಲಿದ್ದರು. ಜಾರಿ ಬಿದ್ದು ಮೂಳೆ ಮುರಿಯಿತು. ಮಠದ ಸಂನ್ಯಾಸಿನಿಯರು ಆಕೆಗೆ ಸಹಾಯಕರಾಗಿದ್ದರು. ೧೯೪೯ರ ಅಕ್ಟೋಬರ್ ೧೧ರಂದು ಜೊಸೆಫಿನ್ ಮೆಕ್‌ಲೌಡ್ ಶಾಂತಿಯಿಂದ ಮೃತರಾದರು. ಆಗ ಅವರಿಗೆ ತೊಂಭತ್ತು ವರ್ಷ.

## ಉಪಸಂಹಾರ

ವಿವೇಕಾನಂದರ ಜೀವನದಲ್ಲಿ ನೆರವಾಗಿ ಕೆಲಸ ಮಾಡಿದವರ ಸಂಖ್ಯೆ ಗಣನೀಯ. ಪರಮಹಂಸರ ನಂತರ ಅವರ ಶಿಷ್ಯರೆಲ್ಲ ವಿವೇಕಾನಂದರ ಬಂಟರಾದರು, ಎಲ್ಲೋ ಒಬ್ಬಿಬ್ಬರು ಮಾತ್ರ ಅವರ ಅಭಿಪ್ರಾಯಗಳನ್ನು ಪ್ರಶ್ನಿಸಿದರು. ಇನ್ನು ವಿವೇಕಾನಂದರ ಶಿಷ್ಯರೋ? ಅವರೆಲ್ಲ ವಿವೇಕಾನಂದರಿಗೆ ತಮ್ಮ ಜೀವನವನ್ನೇ ಸಮರ್ಪಿಸಿದರು. ಅವರ ಒಂದು ಮಾತನ್ನು ನಡೆಸಲು ತಮ್ಮ ಸರ್ವಸ್ವವನ್ನೂ ವಿನಿಯೋಗಿಸಿದರು.

ವಿವೇಕಾನಂದರ ಪರಿವಾರದಲ್ಲಿ ಅವರ ಅಮೆರಿಕನ್ ಸ್ತ್ರೀ ಭಕ್ತರ, ಇಂಗ್ಲೆಂಡಿನ ಶಿಷ್ಯರ ಸ್ಥಾನ ಬಹು ಮುಖ್ಯ. ನಿವೇದಿತಾ ವಿವೇಕಾನಂದರ ಕಾರ್ಯವನ್ನು ಅವರ ನಂತರ ಹೆಚ್ಚು ಉತ್ಸಾಹದಿಂದ ಮುಂದುವರಿಸಿದರು. ಹಾಗೆಯೇ ಕ್ರಿಸ್ಟೀನ್, ಮಿಸೆಸ್ ಓಲಿ ಬುಲ್. ಇವರೆಲ್ಲರ ನಡುವೆ ಎದ್ದು ಕಾಣುವ ವ್ಯಕ್ತಿತ್ವ ಮಿಸ್ ಜೊಸೆಫಿನ್ ಮೆಕ್‌ಲೌಡ್‌ದು. ಟಾಂಟೈನ್ (ಚಿಕ್ಕಮ್ಮ) ಎಂದು ಅವರನ್ನು ಎಲ್ಲರೂ ಪ್ರೀತಿಯಿಂದ ಕರೆಯುತ್ತಿದ್ದರು.

'ನಾನು ವಿವೇಕಾನಂದರ ಶಿಷ್ಯೆ ಅಲ್ಲ, ಅವರ ಸ್ನೇಹಿತೆ' ಎಂದು ಟಾಂಟೈನ್ ಪದೇ ಪದೇ ಹೇಳುತ್ತಿದ್ದರು. ಇವರ ಬಗೆಗೆ ವಿವೇಕಾನಂದರಿಗೂ ಅಭಿಮಾನ. 'ಇತರರನ್ನು ನಾನು ತಯಾರು ಮಾಡಬೇಕಾಯಿತು, ಆದರೆ ಜೋ ಮಾತ್ರ ನನ್ನ ಬಳಿಗೆ ಬರುವಾಗಲೇ ಸಿದ್ಧಳಾಗಿ, ಪರಿಪೂರ್ಣಳಾಗಿದ್ದಳು,' ಎನ್ನುವರು.

'ನಾನು ನಿಮ್ಮ ಕಾರ್ಯದಲ್ಲಿ ಸಹಾಯ ಮಾಡಲು ಏನು ಮಾಡಲಿ' ಎಂದು ಜೋ ಕೇಳಿದಾಗ ವಿವೇಕಾನಂದರು ತಕ್ಷಣ ಉತ್ತರ ಕೊಟ್ಟರು, 'ನನ್ನ ಕೆಲಸ ಮಾಡಬೇಕೆಂದಿದ್ದರೆ ಭಾರತವನ್ನು ಪ್ರೀತಿಸು!' ವಿವೇಕಾನಂದರ ಈ ಸಂದೇಶವನ್ನು ಜೋ ಮೆಕ್‌ಲೌಡ್ ಎಂದಿಗೂ ಮರೆಯಲಿಲ್ಲ. ಆಕೆ ಭಾರತವನ್ನು ತನುಮನಧನಗಳಿಂದ ಪ್ರೀತಿಸಿದರು. ಯಾರನ್ನು ನೋಡಿದರೂ ಯಾರನ್ನು ಸಂಧಿಸಿದರೂ 'ಇವರಿಂದ ಭಾರತಕ್ಕೆ ಹೇಗೆ ಸಹಾಯ ಆದೀತು' ಎಂಬುದೇ ಜೋ ಚಿಂತೆ. ಒಬ್ಬ ವೈದ್ಯನಾಗಲಿ, ಎಂಜಿನಿಯರ್ ಆಗಲಿ ಆತನ ಸಹಾಯ ಭಾರತಕ್ಕೆ ಅಗತ್ಯ ಎಂದು ಅರಿತರೆ ಸರ್ವಪ್ರಯತ್ನವನ್ನೂ ಮಾಡಿ ಆತನನ್ನು ಭಾರತಕ್ಕೆ ಕರೆತಂದು ಕಾರ್ಯನಿರತನನ್ನಾಗುವಂತೆ ಮಾಡುತ್ತಿದ್ದರು ಈ ಭಾರತದ ಶ್ರೇಯಾಕಾಂಕ್ಷಿ.

ಇದೇ ಆಕೆಯ ಜೀವನದ ವ್ರತ ಆಯಿತು. ಮಿಸ್ ಮೆಕ್‌ಲೌಡ್ ಅನೇಕ ಸಲ ಹೇಳಿದ್ದುಂಟು, 'ನಾನು ಧ್ಯಾನ ಮಾಡುವುದಿಲ್ಲ, ಪೂಜೆ ಮಾಡುವುದಿಲ್ಲ, ನನ್ನ ವಿಧಾನವೇ ಬೇರೆ—ಸ್ವಾಮಿ ವಿವೇಕಾನಂದರ ಕಾರ್ಯವನ್ನು ಮುಂದುವರಿಸುವುದು!' ❑